# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1049(1308)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಷಯ : ಭಾರತೀಯ ಪರಂಪರೆ ಮತ್ತು ಸಂರಕ್ಷಣೆ ಸಂಸ್ಥೆಯನ್ನು ರಾಜ್ಯದಲ್ಲಿ ಸ್ಥಾಪಿಸುವ ಬಗ್ಗೆ

(ಅ) ಕೇಂದ್ರ ಸರ್ಕಾರದ ಸಂಸ್ಕೃತಿಯ ಮಂತ್ರಾಲಯ ದೇಶದಲ್ಲಿ ಭಾರತೀಯ ಪರಂಪರೆ ಸಂರಕ್ಷಣೆ ಸಂಸ್ಥೆಯನ್ನು (Indian Institute of Heritage and Conservation) ಸ್ಥಾಪಿಸುವ ಪ್ರಸ್ತಾವನೆ ಹೊಂದಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ವಿವರ ನೀಡುವುದು)

(ಆ) ರಾಜ್ಯ ಸರ್ಕಾರದಲ್ಲಿ ಈ ಮಾಹಿತಿ ಲಭ್ಯವಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಅಗತ್ಯವಿರುವ ಮಾಹಿತಿ ಪಡೆದು ಇದರ ರೂಪುರೇಷೆಗಳನ್ನು ಮತ್ತು ದೊರೆಯಲಿರುವ ಕೇಂದ್ರದ ಆರ್ಥಿಕ ನೆರವಿನ ಬಗ್ಗೆ ಪರಿಶೀಲನೆ ನಡೆಸುವುದೇ;

(ಇ) ಕರ್ನಾಟಕ ರಾಜ್ಯ ಒಂದು ಸಂಸ್ಕೃತಿ ಮತ್ತು ಪಾರಂಪರಿಕ ಇತಿಹಾಸವುಳ್ಳ ರಾಜ್ಯವಾಗಿದ್ದು, One State-Many worlds ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಇಂತಹ ಭಾರತೀಯ ಪರಂಪರೆ ಮತ್ತು ಸಂರಕ್ಷಣೆ ಸಂಸ್ಥೆ ಒಂದನ್ನು ಸಂಸ್ಕೃತಿ ನಗರ ಮೈಸೂರಿನಲ್ಲಾಗಲಿ, ಶಿಲ್ಪ ಕಲೆಯ ತವರು ಬೇಲೂರು-ಹಳೇಬೀಡುಗಳಲ್ಲಾಗಲಿ, ಕರ್ನಾಟಕ ಗತ ವೈಭವ ಮೆರೆದ ಹಂಪಿಯಲ್ಲಾಗಲಿ ಅಥವಾ UNESCO ಪುರಸ್ಕೃತ ಪಟ್ಟದಕಲ್ಲು - ಐಹೊಳೆಯಲ್ಲಿ ಆಗಲೀ ಸ್ಥಾಪಿಸಲು ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಲು ರಾಜ್ಯ ಸರ್ಕಾರ ಮುಂದಾಗುವುದೇ ? (ವಿವರ ನೀಡುವುದು)